M.G.S. Consumers' Co-operative Society

387. Sri K. R. SRINIVASULU NAYUDU (Shanthinagar).—

Will the Minister for Co-operation be pleased to state :—

(*a*) the amount of profit made or loss incurred by the M.G.S. Consumers Co-operative Society, Cubbon Park, Bangalore, upto the last convenient date (yearwise break up may be furnished) ;

(*b*) whether there is any proposal before the Government to close it, as it is running under loss or run it departmentally ?

Sr. A. SHAKARA ALVA (Minister for Co operation).—

(*c*) Details regarding profit or loss from the inception of the stores commencing from 1-7-1965 is as under.—

Year	*Profit* (+)	*Loss*(—)
1965-66	Rs. 19,637-90	...
1966-67	...	54,856-60
1967-68	...	85,015-56
1968-69	...	67,555-03
1969-70	...	38,148-18
1970-71	...	72,902-98
1971-72	...	79,291-68

(*b*) The proposal to close the stores is under consideration.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಮೊದಲನೇ ವರ್ಷ ರೂ 19. 637-90 ಪೈಸಾ ಲಾಭ ಬಂದಿದೆ ಎಂದು ಹೇಳಿದ್ದೀರಿ, ನಂತರ ಪ್ರತಿವರ್ಷವೂ ನಷ್ಟ ಹೆಚ್ಚಾಗಿ ಆಗಿದೆ. ಅದರಲ್ಲಿ ಒಟ್ಟು ಸುಮಾರು 39,770 ರೂಪಾಯಿ ನಷ್ಟವಾಗಿದೆ. ಬೆ ಗಳೂರಿನಲ್ಲಿ ಅರಿತುಬರಿತಂತಹ ಬುದ್ಧಿವಂತರು ಇರುವ ಸೊಸೈಟಿಯಲ್ಲಿ ಇಷ್ಟೊಂದು ಲಾಕ್ಸಾನು ಆಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿಟ್ಟಿನ ಗುರುತು ಹಾಕಂ ಮಂತಹವರು ಇರುವ ಸೊಸೈಟಿಗಳಲ್ಲಿ ನಷ್ಟವಾಗುವುದರಲ್ಲಿ ಆಶ್ಚರ್ಯವಿಲ್ಲ ಅಲ್ಲವೇ ?

ಶ್ರೀ ಎ. ಶಂಕರಆಳ್ವ.—ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಕೆಲವು ಸೊಸೈಟಿಗಳು ಚೆನ್ನಾಗಿ ನಡೆಯುತ್ತವೆ, ಕೆಲವು ಸೊಸೈಟಿಗಳು ಚೆನ್ನಾಗಿ ನಡೆಯುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಆ ಸೊಸೈಟಿಯಲ್ಲಿ ಈ ತರಹ ನಷ್ಟ ಉಂಟಾಗುತ್ತಿರುವುದರಿಂದ ಅದನ್ನು ಲಿಕ್ವಿಡೇಟ್ ಮಾಡಬೇಕೆಂದು 1972 ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಸರ್ಕಾರದ ಆದೇಶ ಬಂದರೂ ಕೂಡ ಅದನ್ನು ಹಾಗೆಯೇ ಉಳಿಸಿಕೊಂಡಿರುವುದಕ್ಕೆ ಕಾರಣವೇನು?

ಶ್ರೀ ಎ. ಶಂಕರಆಳ್ವ.—ಈಗ ಅದು ತನಿಖೆ ನಡೆಯುತ್ತಿದೆ. ಅದರ ವರದಿ ಬಂದಮೇಲೆ ಅದನ್ನು ಲಿಕ್ವಿಡೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ ಆರ್ ಶ್ರೀನಿವಾಸುಲು ನಾಯ್ಡು.—ಅದನ್ನು ಲಿಕ್ವಿಡೇಟ್ ಮಾಡತಕ್ಕ ಕಾರ್ ದಲ್ಲಿ ಈಗ ಹಾಲಿ ಆ ಸೊಸೈಟಿಯಲ್ಲಿರತಕ್ಕ ಹಳೆಯ ಸ್ಟಾಕನ್ನು ಜನತಾ ಬಜಾರಿಗೆ ಕೊಡುತ್ತೀರಾ ? ಅಥವಾ ಸೂಪರ್ ಬಜಾರಿಗೆ ಕೊಡುತ್ತೀರಾ ? ಅಥವ ಆಕ್ಷನ್ ಹಾಕುತ್ತೀರಾ ?

ಶ್ರೀ ಎ. ಶಂಕರಆಳ್ವ.—ಅದನ್ನು ಆಕ್ಷನ್ ಮಾಡಬೇಕೇ ಅಥವಾ ಯಾವರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಆಲೋಚನೆ ಮಾಡಿ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—1966—67ರಿಂದ 1971-72ರವರೆಗೆ ಪ್ರತಿ ವರ್ಷ ಕೂಡ ಲಕ್ಷ ಗಟ್ಟಲೆ ಹಣ ದುರುಪಯೋಗವಾಗಿದೆ. ಈ ರೀತಿ ಪ್ರತಿ ವರ್ಷ ಲುಕ್ಸಾನು ಆಗುವುದಕ್ಕೆ ಮುಖ್ಯವಾದ ಕಾರಣಗಳಾದರೂ ಏನೆಂದು ಕಂಡು ಹಿಡಿದಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅನೇಕ ಕಾರಣಗಳು ಇವೆ. ಅಲ್ಲಿ ಸಾಮಾನುಗಳನ್ನು ಪರ್ಚೇಸ್ ಮಾಡಲಾಗುವುದಕ್ಕೆ ಒಂದು ಕಮಿಟಿ ಇಲ್ಲದೆ ಕೆಲವು ಮಾರಾಟವಾಗದೆ ಇರತಕ್ಕಂತಹ ಸಾಮಾನುಗಳನ್ನು ಸಹ ಪರ್ಚೇಸ್ ಮಾಡುವುದರಿಂದ ಕೆಲವು ಸ್ಟಾಕುಗಳು ಹಾಗೆಯೇ ಇರುತ್ತವೆ. ಅದಕ್ಕೆ ತೆಗೆದು ಕೊಂಡು ಹಣಕ್ಕೆ ಬಡ್ಡಿ ಸಹ ಕೊಡಬೇಕಾಗುತ್ತದೆ. ಆಮೇಲೆ ಕೆಲವು ಸಿವಿಲ್ ಆರ್ಬಿಟ್ರೇಶನ್ ಆಗಿವೆ ; ಮತ್ತು ಕೆಲವು ದುರುಪಯೋಗವಾಗಿವೆ.

ಶ್ರೀ ಸಿ. ಬೈರೇಗೌಡ.—ಈ ಸಹಕಾರೀ ಸಂಘದಲ್ಲಿ ಸರ್ಕಾರೀ ಷೇರ್ ಕ್ಯಾಪಿಟರ್ ಎಷ್ಟು; ಮತ್ತು ಸಂಘದ ಷೇರ್ ಕ್ಯಾಪಿಟರ್ ಎಷ್ಟು ?

ಶ್ರೀ ಎ. ಶಂಕರ ಆಳ್ವ.—ಸಂಘದ ಷೇರ್ ಕ್ಯಾಪಿಟರ್ 61,530 ರೂಪಾಯಿ ; ಸರ್ಕಾರದವರು 50 ಸಾವಿರ ರೂಪಾಯಿ ಹಾಕಿದ್ದಾರೆ. ಅದರ ಜೊತೆಗೆ 3ಲಕ್ಷ ಸಾಲ 5 ಪರ್ಸೆಂಟ್ ಬಡ್ಡಿಯ ಮೇಲೆ ಮತ್ತು ಮೂರು ಲಕ್ಷ 6 ಪರ್ಸೆಂಟ್ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—1966-67ರಿಂದ ಇದರಲ್ಲಿ ನಷ್ಟವಾಗಿದೆ. ಇದಕ್ಕೆ ಯಾರು ಕಾರಣರೋ ಅವರ ಮೇಲೆ ಕಾರ್ಯಕ್ರಮವನ್ನೇನಾದರೂ ತೆಗೆದುಕೊಂಡಿದ್ದೀರಾ ? ಮತ್ತು ತೆಗೆದುಕೊಳ್ಳದಿದ್ದರೆ ಈಗಲಾದರೂ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಯಾರು ಡಿಫಾಲ್ಟ್ ಮಾಡಿದ್ದಾರೆ ಅವರ ಮೇಲೆ ಅವಾರ್ಡ್ ಹಾಕಿ ಡಿಕ್ರಿಯಾಗಿದೆ. ಆದ್ದರಿಂದ ದುರುಪಯೋಗ ಮಾಡಿದವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಸಂಘವನ್ನು ಮುಚ್ಚುವ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಿರಿ. ಈ ರೀತಿ ಸಹಕಾರೀ ತತ್ವದ ಮೇಲೆ ಇದನ್ನು ನಡೆಸುವುದರ ಬದಲು ಇದನ್ನು ಮುಚ್ಚುತ್ತೇವೆಂದು ಹೇಳಿದರೆ ಹೇಗೆ ! ಅಲ್ಲದೆ ಇದು ಸರ್ಕಾರೀ ನೌಕರರದ್ದೇ ಆಗಿರುವುದರಿಂದ ರಿಕವರೀಸ್ ವಸೂಲು ಮಾಡುವುದಕ್ಕೆ ಕಷ್ಟವೇನೂ ಇಲ್ಲ. ಆದ್ದರಿಂದ ರಿಕವರೀಸ್ ಮಾರ್ಗಗಳನ್ನು ಹುಡುಕಿ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ನಾವು ತನಿಖೆ ಮಾಡಿ ನೋಡಿ, ರಿವ್ಯೆವ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುತ್ತೇವೆ. ಇಲ್ಲದಿದ್ದರೆ ಹೊಸ ಸೊಸೈಟಿಯನ್ನು ಬೇಕಾದರೆ ಮಾಡಿಕೊಳ್ಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರತೀ ವರ್ಷದಲ್ಲಿ ಲುಕ್ಸಾನು ಆಗುವಾಗ ಮುಂದಿನ ವರ್ಷ ಲುಕ್ಸಾನು ಆಗದೆ ಹಾಗೆ ತಡೆಗಟ್ಟುವುದಕ್ಕೆ ನಿಮ್ಮ ಇಲಾಖೆಯ ಅಧಿಕಾರಿಗೆ ಆಗಲಲ್ಲವೇ ? ಆಗ ನಿಮ್ಮ ಅಧಿಕಾರಿಗಳು ಏನು ಮಲಗಿಕೊಂಡಿದ್ದರೇ ? ಅಂಥ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಅವೆಲ್ಲವನ್ನೂ ನಾವು ತನಿಖೆ ಮಾಡುತ್ತಿದ್ದೇವೆ. ಏಕೆಂದರೆ ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ.

ಶ್ರೀ ಸಿ. ಆಂದಾನಪ್ಪ.—ಇವರು ಸಾಮಾನುಗಳನ್ನು ಕೊಂಡುಕೊಳ್ಳುವಾಗ ಬಜಾರ್ ರೇಟಿಗಿಂತ ಜಾಸ್ತಿ ಬೆಲೆಗೆ ಕೊಂಡುಕೊಂಡು ಮತ್ತು ಮಾರಾಟವಾಗದ ಸಾಮಾನುಗಳನ್ನು ಕೊಂಡು ಕೊಂಡು ಲುಕ್ಸಾನು ಆಗಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಕೋಆಪರೇಟಿವ್ ಆಕ್ಟ್ ಸೆಕ್ಷನ್ 64ರ ಪ್ರಕಾರ ಎನ್‌ಕ್ವಾಯರಿ ಮಾಡಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದು ಎನ್‌ಕ್ವಾಯರಿಯಲ್ಲಿ ಇದೆ.

Sri J. P. SARWESH.—May I know whether the same office bearers are continuing from 1967 to 1972 ?

Sri A. SHANKAR ALVA.—I cannot give a reply to that.

ಶ್ರೀ ಹಂಪಿ ಶಿವಣ್ಣ.—ಇಷ್ಟು ವರ್ಷಗಳಲ್ಲಿ ಈ ಸೊಸೈಟಿಯಲ್ಲಿ ಲುಕ್ಸಾನು ಆಗುತ್ತಿದೆ ಎಂದು ಹೇಳುತ್ತಿದ್ದೀರಿ. ಹೀಗೆ ಆಗುವಾಗ ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡಿಪ್ಯೂಟಿ ರಿಜಿಸ್ಟ್ರಾರ್‌ರವರು ಏನು ಮಾಡುತ್ತಿದ್ದರು ? ಮತ್ತು ಅಂಥವರ ಮೇಲೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಅದನ್ನು ತನಿಖೆ ಮಾಡುತ್ತಿದ್ದೇವೆ. ಯಾವ ಅಧಿಕಾರಿ ಇದಕ್ಕೆ ಕಾರಣ ಇರುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ಈಗ ಸಾಲ ಕೊಟ್ಟಿದ್ದರಲ್ಲಿ ಮತ್ತು ದುರುಪಯೋಗವಾದ ಹಣದಲ್ಲಿ ಟೈಂ ಬಾರ್ಡ್ ಕೇಸುಗಳು ಎಷ್ಟು ಇವೆ?

ಶ್ರೀ ಎ. ಶಂಕರ ಆಳ್ವ.—ಅದರ ಎಷ್ಟರ ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಸರ್ಕಾರಿ ನೌಕರರು ಬಡ ನೌಕರರು. ಸಹಕಾರಿ ಸಂಘಗಳಿಗೆ ಸೇರಿದರೆ ಸಹಕಾರೀ ತತ್ವದಿಂದ ಅನುಕೂಲವಾಗಬಹುದು ಎಂದು ಇದಕ್ಕೆ ಎಲ್ಲರೂ ಸೇರಿದ್ದಾರೆ. ಆದರೆ ಅವರ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ :—

> "Sustained efforts are being made to recover this amount, since most of the defaulters have to pay heavy sums towards Government dues, we are finding it difficult to effect recoveries from them".

ಅಂದರೆ ಹಣವಂತೂ ಗ್ಯಾರೆಂಟಿ ಬರುವುದಿಲ್ಲ. ಸರ್ಕಾರದವರು ನುಮಾರು 6 ಲಕ್ಷ ರೂಪಾಯಿಯನ್ನು 5 ಮತ್ತು 6 ಪರ್‌ಸೆಂಟ್ ಬಡ್ಡಿಗೆ ಕೊಟ್ಟಿದ್ದೀರಿ. ಆಗಲೇ 4 ಲಕ್ಷ ರೂಪಾಯಿ ಹೊರಟು ಹೋಗಿದೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ. - ಆದಷ್ಟು ಪ್ರಯತ್ನ ಮಾಡಿ ಯಾರಿಂದ ವಸೂಲು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡುತ್ತೇವೆ.

Work Charged Establishment of Public Works Department

451. Sri KAGODU THIMMAPPA (Sagar).—

Will the Minister for Public Works and Electricity be pleased to state :—

(*a*) the number of persons who are working on the work-charged establishment of the State Public Works Department ;

(*b*) whether demands have been received to make their services permanent and grant them pension etc., also ;

(*c*) if so, the action taken b y the Government in this behalf ?

Sri H. M. CHANNABASAPPA (Minister for Public Works and Electricity).—

(*a*) As per figures on 1st January 1972, 12,000 persons were working on the work-charged establishment. Now it may be more.

(*b*) Yes.

(*c*) It is not possible to make them permanent and grant pension.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ 12 ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಜನ ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತೀರಾ?

†ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಆಗಾಗ್ಗೆ ವ್ಯತ್ಯಾಸ ಆಗುತ್ತಾ ಇದೆ. 12 ಸಾವಿರ 1-1-1972 ರಲ್ಲಿ ವರ್ಕ್ಸ್ ಚಾರ್ಜ್ಡ್ ಅಂದರೆ ಆಯಾ ಕೆಲಸಕ್ಕೆ ಅವಶ್ಯಕತೆ ಕಂಡಾಗ ಅವಶ್ಯ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಕೆಲಸ ಕಡಿಮೆ ಇದ್ದಾಗ ಜನ ಕಡಿಮೆಯಾಗುತ್ತಾರೆ ಹೆಚ್ಚು ಕೆಲಸ ಇದ್ದಾಗ ಹೆಚ್ಚಾಗುತ್ತಾರೆ. ಅದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.